# ಆಹಾ ಸುದ್ದಿ!

★ ಸಸಿತೋಟ



ಜಾರ್ಜಿಯಾದ ಈ ವ್ಯಕ್ತಿಯ ಹೆಸರು ಎತಿಬಾರ್. ದೇಹವೇ ಒಂದು ಅಯಸ್ಕಾಂತ. ಆ ಶಕ್ತಿಯಿಂದ 53 ಚಮಚಗಳನ್ನು ದೇಹದ ಮೇಲೆ ನೀಟಾಗಿ ಕೂರಿಸಿಕೊಂಡಿದ್ದಾನೆ. ತಮ್ಮಲ್ಲಿಗೆ ಏನಾದರೂ ಈ ಗಿರಾಕಿ ಬಂದು ಬಿಟ್ಟರೆ ಎಂದು ಹೋಟೇಲ್‌ನವರು ಭಯಪಡುವ ಅಗತ್ಯವಿಲ್ಲ. ಸದ್ಯ ಗಿನ್ನೆಸ್ ದಾಖಲೆಗೋಸ್ಕರ ಮಾತ್ರ ಈ ಚಮತ್ಕಾರವಂತೆ.

ಗಂಡ- ಹೆಂಡತಿ ಮಧ್ಯೆ ವಿಚ್ಛೇದನ ನಡೆಯಲು ಏನೆಲ್ಲ ಕಾರಣಗಳಿರುತ್ತವೆ? ಕೆಲವೊಂದು ಸಂದರ್ಭದಲ್ಲಿ ಕಾರಣಗಳೇ ಬೇಕಾಗಿಲ್ಲ. ಕುವೈತ್‌ನಲ್ಲಿ ಮದುವೆಯಾಗಿ ಒಂದೇ ವಾರಕ್ಕೆ ಪತಿಯಿಂದ ವಿಚ್ಛೇದನ ಕೋರಿದ ಪತ್ನಿ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾಳಂತೆ. ಗಂಡ ಬ್ರೆಡ್ ಮತ್ತು ಹಸಿರು ಬಟಾಣಿ ತಿನ್ನುವ  ಪರಿ ನೋಡಿ ಆಕೆಗೆ ಆಘಾತವಾಯ್ತಂತೆ. ಅಷ್ಟಕ್ಕೂ ಆತ ಹೇಗೆ ತಿನ್ನುತ್ತಿದ್ದ ಎಂದರೆ ಫೋರ್ಕ್ ಸಹಾಯವಿಲ್ಲದೇ ತಿನ್ನುತ್ತಿದ್ದನಂತೆ. ಬೇಡದ ಗಂಡನ್ನ ನಿವಾರಿಸಿಕೊಳ್ಳುವವರಿಗೆ ಇದೂ ಒಂದು ಟಿಪ್ ಆಗಬಹುದು.

ಅಂತೂ ಇಂತೂ ಒಂದು ವರ್ಷ ಮುಗಿಯಿತು ಎಂಬ ಖುಷಿಯನ್ನು ಬೇರೆ ಬೇರೆ ಕಡೆ ಜನ ಅನುಭವಿಸುವ ಪರಿಯೇ ಬೇರೆ ಬೇರೆ. ಉರುಗ್ವೆಯಲ್ಲಿ ಡಿಸೆಂಬರ್ 31 ಬಂದರೆ ಮನೆಯೊಳಗೆ ಸಂಗ್ರಹವಿದ್ದ ನೀರೆಲ್ಲ ಬೀದಿಗೆ ಬಂದು ಬಿಡುತ್ತದೆ. ನಮ್ಮಲ್ಲಿ ಹೋಳಿ ರಂಗನ್ನು ಎರಚಿದ ಹಾಗೆ ಅಲ್ಲಿ ಬಕೆಟ್‌ನಿಂದ ನೀರನ್ನು ದಾರಿಹೋಕರ ಮೇಲೆ ಎರಚಿ ಖುಷಿಪಡುತ್ತಾರಂತೆ. ಬೆಂಗಳೂರಿಗರೂ ಇದನ್ನು ಅನುಕರಿಸಲು ಹೋದರೆ ಜಲಮಂಡಳಿಯೇ ಮುಷ್ಕರ ಹೂಡಬೇಕಾದೀತು!



ಅಮೆರಿಕಾದಲ್ಲಿ ತಯಾರಾದ ಈ ಎಲ್‌ಎಸ್ 3 ರೊಬಾಟ್ ಕುದುರೆಯಂತೆ ಕೆನೆಯಬಲ್ಲದು, ಓಡಬಲ್ಲದು. ಕತ್ತೆಯಂತೆ ಬೆನ್ನ ಮೇಲೆ ಹೊರೆ ಹೊತ್ತು ಎಂತಹ ದುರ್ಗಮ ಪ್ರದೇಶದಲ್ಲಾದರೂ ನಡೆಯುತ್ತದಂತೆ. ವಿಶೇಷವಾಗಿ ಸೈನಿಕರಿಗೆ ನೆರವು ನೀಡುತ್ತದಂತೆ. ಅಫ್ಘಾನಿಸ್ತಾನದಲ್ಲಿ ಪಾಠ ಕಲಿತ ಅಮೆರಿಕಾ ಈಗ ಪ್ರಾಚೀನತೆಯನ್ನು ಆಧುನಿಕತೆಯ ಜೊತೆ ಹೊಸೆದಿದೆ.





ಹಾಂಕಾಂಗ್‌ನಲ್ಲಿ 2041ರ ವೇಳೆಗೆ ಪ್ರತಿ ಮೂವರಲ್ಲಿ ಒಬ್ಬರು 65 ವರ್ಷಗಳಿಗಿಂತ ಮೇಲ್ಪಟ್ಟವರಾಗಿರುತ್ತಾರಂತೆ. ಅಂಥವರ ಬಗ್ಗೆ ಈಗಿಂದಲೇ ಯುವಕರಲ್ಲಿ ಅರಿವು ಮೂಡಿಸಲು 'ಎಲ್ಡ್‌ಪಥಿ' ಎಂಬ ಕಾರ್ಯಕ್ರಮವನ್ನೇ ಅಲ್ಲಿ ಶುರು ಮಾಡಲಾಗಿದೆ. ವಿಶೇಷ ರೀತಿಯ ಕನ್ನಡಕ ಮತ್ತು ಉಡುಪನ್ನು ತಯಾರಿಸಲಾಗಿದ್ದು, ಇದನ್ನು ಧರಿಸಿ ಯುವಕರಿಗೆ ನಡೆದಾಡಲು ಹೇಳುತ್ತಾರಂತೆ. ವೃದ್ಧರು ಹೇಗೆ ಕಷ್ಟಪಡುತ್ತಾರೋ ಅದೇ ರೀತಿಯ ಕಷ್ಟದ ಅನುಭವ ಆಗುತ್ತಂತೆ. ವಯಸ್ಸಾದ ಮೇಲಂತೂ ಕಷ್ಟಪಡುವುದು ಇದ್ದೇ ಇದೆ, ಅದಕ್ಯಾಕೆ ಈಗಿನಿಂದಲೇ ತರಬೇತಿ ಕೊಟ್ಟು, ಅಮೂಲ್ಯ ಸಂತೋಷವನ್ನು ಹಾಳು ಮಾಡುತ್ತಾರೋ!

ಕೆಲವರಿಗೆ ವಿಚಿತ್ರ ವಸ್ತುಗಳನ್ನು ಸಂಗ್ರಹಿಸುವ ಹವ್ಯಾಸ. ಎಷ್ಟೆಂದರೆ ಮೆದುಳಿನ ಅಂಗಾಂಶಗಳನ್ನೂ ಸಂಗ್ರಹಿಸುವಷ್ಟು. ಸ್ಯಾನ್ ಡಿಯಾಗೋದ ವೈದ್ಯಕೀಯ ಇತಿಹಾಸ ವಸ್ತು ಸಂಗ್ರಹಾಲಯದಿಂದ ಕದ್ದ ಮೆದುಳಿನ ಅಂಗಾಶಗಳ ವಿವಿಧ ಮಾದರಿಗಳನ್ನು ಕ್ಯಾಲಿಫೋರ್ನಿಯಾದ ವ್ಯಕ್ತಿಯೊಬ್ಬ ಆನ್‌ಲೈನ್‌ನಲ್ಲಿ 600 ಡಾಲರ್‌ಗಳಿಗೆ ಖರೀದಿಸಿದನಂತೆ.  ಈ ಮೆದುಳುಗಳು 1890ರ ದಶಕಕ್ಕೆ ಸೇರಿದ್ದ ವ್ಯಕ್ತಿಗಳದ್ದಂತೆ. ಮಾನಸಿಕ ಕಾಯಿಲೆಗಳಿಂದ ಸತ್ತ ವ್ಯಕ್ತಿಗಳ ಮೆದುಳುಗಳು ಅವು. ಕದ್ದವನಿಗೆ ದುಡ್ಡು ಬೇಕಿತ್ತು. ಖರೀದಿಸಿದವನಿಗೆ? ಇಬ್ಬರನ್ನೂ ಬಂಧಿಸಿರುವ ಪೊಲೀಸರು ಉತ್ತರ ಹುಡುಕಲು ಹೋಗಿ ಮೆದುಳು ಕೆಡಿಸಿಕೊಳ್ಳುತ್ತಿದ್ದಾರೆ.